ಜೆಎಸ್‌ಎಸ್ ಮಹಾವಿದ್ಯಾಪೀಠ

# ಜೆಎಸ್‌ಎಸ್ ಮಹಿಳಾ ಕಾಲೇಜು

ಚಾಮರಾಜನಗರ ವಿಶ್ವವಿದ್ಯಾನಿಲಯಕ್ಕೆ ಸಂಯೋಜಿತ, ನ್ಯಾಕ್‌ನಿಂದ B+ (CGPA: 2.74) ಮಾನ್ಯತೆ ಪಡೆದಿದೆ

**ಕೊಳ್ಳೇಗಾಲ – 571 440 ಚಾಮರಾಜನಗರ ಜಿಲ್ಲೆ**

☎: 08224-252149 jsscwk@gmail.com www. jsscwkgl.org

## "ಕ್ರೀಡೆಗಳಲ್ಲಿ ಗೆಲುವು-ಸೋಲು ಸಹಜ, ನಿರಂತರ ಪ್ರಯತ್ನ ನಿಮ್ಮದಾಗಲಿ"

**– ಪ್ರೊ. ಎಂ. ಆರ್. ಗಂಗಾಧರ್**

ದಿನಾಂಕ: 10.04.2026 ರಂದು ಜೆಎಸ್‌ಎಸ್ ಮಹಿಳಾ ಕಾಲೇಜಿನಲ್ಲಿ ಚಾಮರಾಜನಗರ ವಿಶ್ವವಿದ್ಯಾನಿಲಯ ಹಾಗೂ ಶ್ರೀ ಮಹದೇಶ್ವರ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕೊಳ್ಳೇಗಾಲ ಇವರ ಸಹಯೋಗದಲ್ಲಿ ಅಂತರ ಕಾಲೇಜು ಮಹಿಳೆಯರ ಕ್ರೀಡಾಕೂಟ-2026ನ್ನು ಹಮ್ಮಿಕೊಳ್ಳಲಾಯಿತು.

ಉದ್ಘಾಟನಾ ಕಾರ್ಯಕ್ರಮಕ್ಕೆ ಆಗಮಿಸಿದ ಗೌರವಾನ್ವಿತ ಗಣ್ಯರನ್ನು ವಿದ್ಯಾರ್ಥಿನಿಯರು ಸ್ವಾಗತನೃತ್ಯದ ಮುಖೇನ ಸ್ವಾಗತಿಸಿದರು. ಪಥ ಸಂಚಲನದ ಮೂಲಕ ಗಣ್ಯರಿಗೆ ಗೌರವ ಸಲ್ಲಿಸಲಾಯಿತು. ನಂತರ ಕ್ರೀಡಾ ಜ್ಯೋತಿಯನ್ನು ಗಣ್ಯರಿಗೆ ಹಸ್ತಾಂತರಿಸಿ ಆಗಮಿಸಿದ್ದ ವಿವಿಧ ಕಾಲೇಜಿನ ಸ್ಪರ್ಧಾರ್ಥಿಗಳನ್ನು ಪರಿಚಯಿಸಿ ಅತಿಥಿ ಗಣ್ಯರಿಂದ ಧ್ವಜಾರೋಹಣ ನೆರವೇರಿಸಲಾಯಿತು. ನಾಡಗೀತೆ ಗಾಯನ ಮಾಡುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಯಿತು..

ಕಾರ್ಯಕ್ರಮದ ಉದ್ಘಾಟನೆ ನೆರವೇರಿಸಿದ ಪ್ರೊ. ಎಂ. ಆರ್. ಗಂಗಾಧರ್, ಮಾನ್ಯ ಕುಲಪತಿಗಳು, ಚಾಮರಾಜನಗರ ವಿಶ್ವವಿದ್ಯಾನಿಲಯ ಇವರು "ಶೈಕ್ಷಣಿಕ ಚಟುವಟಿಕೆಗಳಂತೆ ಕ್ರೀಡಾ ಚಟುವಟಿಕೆಗಳಲ್ಲಿ ಭಾಗವಹಿಸುವುದು ಅಗತ್ಯ. ಕ್ರೀಡಾ ಅವಕಾಶಗಳು ಬಂದಾಗ ಅದನ್ನು ಉಪಯೋಗಿಸಿಕೊಳ್ಳುವುದು ಬಹು ಪ್ರಮುಖವಾಗುತ್ತದೆ. ಅಲ್ಲದೆ ಕ್ರೀಡಾಸಕ್ತಿ ಬೆಳೆಸಲು ವಿದ್ಯಾರ್ಥಿಗಳಗಾಗಿಯೇ ಹಲವಾರು ನೀತಿ-ನಿಯಮಗಳನ್ನು ಜಾರಿಗೊಳಿಸಲಾಗಿದೆ. ಕ್ರೀಡೆಗಳಲ್ಲಿ ಗೆಲುವು-ಸೋಲು ಸಹಜ, ನಿರಂತರ ಪ್ರಯತ್ನ ನಿಮ್ಮದಾಗಲಿ" ಎಂದು ಕ್ರೀಡಾ ಸ್ಪರ್ಧಿಗಳಿಗೆ ಹಾರೈಸಿದರು.

ಧ್ವಜಾರೋಹಣ ನೆರವೇರಿಸಿದ ರಾಷ್ಟ್ರೀಯ ಖೋ-ಖೋ ಕ್ರಿಡಾಪಟುಗಳಾದ ಕು|| ವೀಣಾ ಅವರು ಮಾತನಾಡಿ "ಕ್ರೀಡಾ ಪಯಣದಲ್ಲಿ ಸೋಲು ಸಹಜ, ಗೆಲವು ಖಚಿತ. ಪ್ರಯತ್ನ ನಿಲ್ಲಿಸದೆ ನಿರಂತರವಾಗಿ ಮುಂದುವರಿದರೆ ರಾಷ್ಟ್ರ/ಅಂತರಾಷ್ಟ್ರೀಯ ಮಟ್ಟದಲ್ಲಿ ಗುರುತಿಸಿಕೊಳ್ಳಬಹುದು" ಎಂದು ಹೇಳಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಯುವ ಮುಂಖಂಡರು ಹಾಗೂ ಉದ್ಯಮಿಗಳಾದ ಶ್ರೀ ಎಸ್. ನಿಶಾಂತ್ ಅವರು ಅಧ್ಯಕ್ಷೀಯ ನುಡಿಗಳನ್ನಾಡಿ "ಶಿಕ್ಷಣ ಪ್ರತಿ ಹಂತದಲ್ಲೂ ಬದಲಾವಣೆಯಾಗುತ್ತಿರುತ್ತದೆ. ವಿದ್ಯಾಭ್ಯಾಸದ ಜೊತೆಗೆ ಕ್ರೀಡಾಸಕ್ತಿ ಅಗತ್ಯ. ನಮ್ಮ ಭೌದ್ಧಿಕ, ಮಾನಸಿಕ ಹಾಗೂ ದೈಹಿಕ ಬೆಳವಣಿಗೆಗೆ ಕ್ರೀಡೆ ಉಪಯುಕ್ತ. ಸೋತಾಗ ಕುಗ್ಗದೆ, ಗೆದ್ದಾಗ ಹಿಗ್ಗದೆ ಸಮಾನವಾಗಿ ಸ್ವೀಕರಿಸುವ ಮನಸ್ಥಿತಿಯನ್ನು ರೂಡಿಸಿಕೊಳ್ಳಿ" ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಚಾಮರಾಜನಗರ ವಿಶ್ವವಿದ್ಯಾನಿಲಯದ ಪರೀಕ್ಷಾಂಗ ಕುಲಸಚಿವರಾದ ಪ್ರೊ. ಮಹದೇವನ್ ಕೆ.ಎಂ., ದೈಹಿಕ ಶಿಕ್ಷಣ ನಿರ್ದೇಶಕರಾದ ಡಾ. ಶಾಂತರಾಜು, ಶ್ರೀ ಮಹದೇಶ್ವರ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಚಾರ್ಯರಾದ ಪ್ರೊ. ಬಿ. ಜಯಲಕ್ಷ್ಮಿ, ದೈಹಿಕ ಶಿಕ್ಷಣ ನಿರ್ದೇಶಕರಾದ ಡಾ. ಜಯಶಂಕರ್, ಜೆಎಸ್‌ಎಸ್ ಮಹಿಳಾ ಕಾಲೇಜಿನ ಪ್ರಾಂಶುಪಾಲರಾದ ಡಾ. ಹೆಚ್.ಎಸ್. ಕೊಂಗಳಪ್ಪ ಹಾಗೂ ದೈಹಿಕ ಶಿಕ್ಷಣ ನಿರ್ದೇಶಕರಾದ ಶ್ರೀ ಎಸ್. ಶ್ರೀಧರ್ ಉಪಸ್ಥಿತರಿದ್ದರು.

ಈ ಕ್ರೀಡಾಕೂಟದಲ್ಲಿ ನಮ್ಮ ಕಾಲೇಜಿನ ವಿದ್ಯಾರ್ಥಿನಿಯರು ವಿವಿಧ ವೇಷಭೂಷಣ ಧರಿಸಿ, ನಮ್ಮ ಸಂಸ್ಕೃತಿಯನ್ನು ಪ್ರತಿಬಿಂಬಿಸಿದರು.



ಪ್ರೊ. ಎಂ. ಆರ್. ಗಂಗಾಧರ್, ಮಾನ್ಯ ಕುಲಪತಿಗಳು, ಚಾಮರಾಜನಗರ ವಿಶ್ವವಿದ್ಯಾನಿಲಯ ರವರು ಕಾರ್ಯಕ್ರಮವನ್ನು ಉದ್ಘಾಟಿಸುತ್ತಿರುವುದು.

ಚಿತ್ರದಲ್ಲಿ ಎಡದಿಂದ ಶ್ರೀ ಶ್ರೀಧರ್, ಕು॥ ವೀಣಾ, ಡಾ. ಹೆಚ್.ಎಸ್. ಕೊಂಗಳಪ್ಪ, ಶ್ರೀ ಎಸ್. ನಿಶಾಂತ್, ಪ್ರೊ. ಮಹದೇವನ್, ಪ್ರೊ. ಜಯಲಕ್ಷ್ಮಿ, ಡಾ. ಶಾಂತರಾಜು ಹಾಗೂ ಡಾ. ಜಯಶಂಕರ್.

ಸಮರೋಪ ಸಮಾರಂಭದಲ್ಲಿ ಬೆಂಗಳೂರಿನ ಹೈಕೋರ್ಟ್ ವಕೀಲರಾದ ಶ್ರೀ ನಾಗಭೂಷಣ್ ರವರು ಮಾತನಾಡಿ ವಿವಿಧ ಕಾಲೇಜುಗಳ ವಿದ್ಯಾರ್ಥಿಗಳು ಉತ್ಸಾಹಭರಿತವಾಗಿ ಭಾಗವಹಿಸಿ ತಮ್ಮ ಪ್ರತಿಭೆ, ಶ್ರಮ ಮತ್ತು ಕ್ರೀಡಾ ಸ್ಫೂರ್ತಿಯನ್ನು ಪ್ರದರ್ಶಿಸಿದ್ದಾರೆ. ಗೆಲವು ಮಾತ್ರವಲ್ಲ ಭಾಗವಹಿಸುವಿಕೆ ಮತ್ತು ತಂಡದ ಮನೋಭಾವವೂ ಅಷ್ಟೇ ಮುಖ್ಯ ಎಂಬ ಸಂದೇಶವನ್ನು ಈ ಕಾರ್ಯಕ್ರಮವು ನಮಗೆ ನೀಡಿದೆ ಎಂದು ತಿಳಿಸಿದರು. ವಿಜೇತರಾದ ಎಲ್ಲಾ ವಿದ್ಯಾರ್ಥಿನಿಯರಿಗೆ ಹಾರ್ದಿಕ ಅಭಿನಂದನೆಗಳು ಮತ್ತು ಭಾಗವಹಿಸಿದ ಪ್ರತಿಯೊಬ್ಬರಿಗೂ ಶುಭಾಷಯಗಳನ್ನು ತಿಳಿಸುತ್ತಾ ನಿಮ್ಮ ಕ್ರೀಡಾ ಸ್ಫೂರ್ತಿ ಸದಾ ಹೀಗೆ ಮುಂದುವರೆಯಲಿ ಎಂದರು.

ಕಾರ್ಯಕ್ರಮದಲ್ಲಿ ಜೆಎಸ್‌ಎಸ್ ಕಾಲೇಜಿನ ಪ್ರಾಂಶುಪಾಲರಾದ ಡಾ. ಹೆಚ್. ಎಸ್ ಕೊಂಗಳಪ್ಪ, ಶ್ರೀ ಮಹದೇಶ್ವರ ಕಾಲೇಜಿನ ಪ್ರಾಂಶುಪಾಲರಾದ ಪ್ರೊ. ಜಯಲಕ್ಷ್ಮಿ ಬಿ, ಶ್ರೀ. ಶಾಂತರಾಜು, ನಿರ್ದೇಶಕರು, ದೈಹಿಕ ಶಿಕ್ಷಣ ವಿಭಾಗ ಚಾಮರಾಜನಗರ ವಿಶ್ವವಿದ್ಯಾನಿಲಯ, ಡಾ ಜಯಶಂಕರ್, ದೈಹಿಕ ಶಿಕ್ಷಣ ನಿರ್ದೇಶಕರು, ಪ್ರಥಮ ದರ್ಜೆ ಕಾಲೇಜು, ಕೊಳ್ಳೇಗಾಲ. ಶ್ರೀ ವಿನಾಯಕ್, ಕೈಗಾರಿಕೊಧ್ಯಮಿ, ಬೆಂಗಳೂರು ಹಾಗೂ ಶ್ರೀ ಶ್ರೀಧರ್ ಎಸ್, ದೈಹಿಕ ನಿರ್ದೇಶಕರು ಜೆಎಸ್‌ಎಸ್ ಮಹಿಳಾ ಕಾಲೇಜು, ಕೊಳ್ಳೇಗಾಲ ರವರು ಉಪಸ್ಥಿತರಿದ್ದರು.

**ಬಹುಮಾನ ವಿಜೇತರು**

1. **ವಾಲಿಬಾಲ್** – ಜೆಎಸ್‌ಎಸ್ ಮಹಿಳಾ ಕಾಲೇಜು, ಕೊಳ್ಳೇಗಾಲ ಪ್ರಥಮ ಬಹುಮಾನ, ಶ್ರೀ ವಾಸವಿ ಕಾಲೇಜು, ಕೊಳ್ಳೇಗಾಲ ದ್ವಿತೀಯ ಬಹುಮಾನ ಮತ್ತು ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜು, ಚಾಮರಾಜನಗರ ತೃತೀಯ ಬಹುಮಾನ ಪಡೆದಿರುತ್ತಾರೆ.
2. **ಥ್ರೋಬಾಲ್** – ನಿಸರ್ಗ ಕಾಲೇಜ್ ಆಫ್ ಮ್ಯಾನೇಜ್‌ಮೆಂಟ್, ಕೊಳ್ಳೇಗಾಲ ಪ್ರಥಮ ಬಹುಮಾನ, ಜೆಎಸ್‌ಎಸ್ ಮಹಿಳಾ ಕಾಲೇಜು, ಕೊಳ್ಳೇಗಾಲ ದ್ವಿತೀಯ ಬಹುಮಾನ ಮತ್ತು ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜು, ಚಾಮರಾಜನಗರ ತೃತೀಯ ಬಹುಮಾನ ಪಡೆದಿರುತ್ತಾರೆ.
3. **ಕಬಡ್ಡಿ** – ಜೆಎಸ್‌ಎಸ್ ಮಹಿಳಾ ಕಾಲೇಜು, ಚಾಮರಾಜನಗರ ಪ್ರಥಮ ಬಹುಮಾನ, ಜೆಎಸ್‌ಎಸ್ ಮಹಿಳಾ ಕಾಲೇಜು, ಕೊಳ್ಳೇಗಾಲ ದ್ವಿತೀಯ ಬಹುಮಾನ ಮತ್ತು ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜು, ಚಾಮರಾಜನಗರ ತೃತೀಯ ಬಹುಮಾನ ಪಡೆದಿರುತ್ತಾರೆ.
4. **ಬಾಲ್ ಬ್ಯಾಡ್ಮಿಂಟನ್** – ಜೆಎಸ್‌ಎಸ್ ಮಹಿಳಾ ಕಾಲೇಜು, ಚಾಮರಾಜನಗರ ಪ್ರಥಮ ಬಹುಮಾನ, ಜೆಎಸ್‌ಎಸ್ ಮಹಿಳಾ ಕಾಲೇಜು, ಕೊಳ್ಳೇಗಾಲ ದ್ವಿತೀಯ ಬಹುಮಾನ ಮತ್ತು ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜು, ಚಾಮರಾಜನಗರ ತೃತೀಯ ಬಹುಮಾನ ಪಡೆದಿರುತ್ತಾರೆ.
5. **ಬ್ಯಾಡ್ಮಿಂಟನ್** – ಜೆಎಸ್‌ಎಸ್ ಮಹಿಳಾ ಕಾಲೇಜು, ಚಾಮರಾಜನಗರ ಪ್ರಥಮ ಬಹುಮಾನ, ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜು, ಚಾಮರಾಜನಗರ ದ್ವಿತೀಯ ಬಹುಮಾನ ಮತ್ತು ಜೆಎಸ್‌ಎಸ್ ಬಿ.ಎಡ್ ಕಾಲೇಜು, ಚಾಮರಾಜನಗರ ತೃತೀಯ ಬಹುಮಾನ ಪಡೆದಿರುತ್ತಾರೆ.
6. **ಖೋ ಖೋ** – ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜು, ಚಾಮರಾಜನಗರ ಪ್ರಥಮ ಬಹುಮಾನ, ಶ್ರೀ ವಾಸವಿ ಕಾಲೇಜು, ಕೊಳ್ಳೇಗಾಲ ದ್ವಿತೀಯ ಬಹುಮಾನ ಮತ್ತು ಜೆಎಸ್‌ಎಸ್ ಮಹಿಳಾ ಕಾಲೇಜು, ಚಾಮರಾಜನಗರ ತೃತೀಯ ಬಹುಮಾನ ಪಡೆದಿರುತ್ತಾರೆ.



ಶ್ರೀ ನಾಗಭೂಷಣ್, ಹೈಕೋರ್ಟ್ ವಕೀಲರು, ಬೆಂಗಳೂರು ರವರು ಸಮಾರೋಪ ಭಾಷಣ ಮಾಡುತ್ತಿರುವುದು. ಚಿತ್ರದಲ್ಲಿ ಎಡದಿಂದ ಡಾ. ಹೆಚ್. ಎಸ್. ಕೊಂಗಳಪ್ಪ, ಪ್ರೊ. ಜಯಲಕ್ಷ್ಮಿ ಬಿ, ಡಾ. ಶಾಂತರಾಜು ಹಾಗೂ ಡಾ. ಜಯಶಂಕರ್, ಶ್ರೀ ವಿನಾಯಕ್.